**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ: ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1974/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಸಂತೋಷ್ ಕುಮಾರ್ ಹೆಚ್. | ಪ್ರಾಸಾ -6 |
| ತಂದೆಯ ಹೆಸರು | : ಬಿ.ಬಿ.ಹುಗಾರ್ | ಚಾಸಾ-12 |
| ವಯಸ್ಸು | : 36 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : KSRTC ಬಸ್ ಚಾಲಕ | ದಿನಾಂಕ:05.12.2024 |
| ವಾಸಸ್ಥಳ | : ಮೂಡಿಗೆರೆ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿದೆ. ಅವರು ಮತ್ತು ಚಾಸಾ-11 ರವರು ನಮ್ಮ ಇಲಾಖೆಯ ಬಸ್ ಚಾಲಕರು.

ಸಾಕ್ಷಿಯು ದಿ.13.08.2023 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ನಿಪಿ-2 ಮತ್ತು ಮತ್ತೊಂದು ಪೋಟೋ ದಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಮಹಜರ್ ನ್ನು ನಿಪಿ-14, ಸಾಕ್ಷಿಯ ಸಹಿಯನ್ನು ನಿಪಿ-14(ಎ), ಪೊಟೋವನ್ನು ನಿಪಿ-15 ಎಂದು ಗುರುತಿಸಲಾಯಿತು.

ದಿ.13.08.2023 ರಂದು ರಾ.7.00 ರಿಂದ 7.45 ರ ಸಮಯಕ್ಕೆ ಮೂಡಿಗೆರೆ ಪೋಲಿಸ್ ಠಾಣೆ ಎದುರು ನಿಪಿ-14 ಕ್ಕೆ ಸಹಿ ಮಾಡಿದ್ದು, ನಿಪಿ-2 ಮತ್ತು ನಿಪಿ-15 ರ ಪೋಟೋಗಳನ್ನು ಅಲ್ಲಿಯೇ ತೆಗೆಯಲಾಗಿದೆ. ದಿ.12.08.2023 ರಂದು ಸ್ವಿಪ್ಟ್ ಕಾರು ಮತ್ತು KSRTC ಬಸ್ ನಡುವೆ ಆದ ಅಪಘಾತದ ಸಂಬಂಧ ಸದರಿ KSRTC ಬಸ್ ನ್ನು ಪೋಲಿಸರು ವಶಕ್ಕೆ ಪಡೆದ ಬಗ್ಗೆ ನಿಪಿ-14 ಕ್ಕೆ ಸಹಿ ಮಾಡಿದ್ದೇನೆ. ಸದರಿ ಬಸ್ ನ ನೋ.ಸಂ.KA-40-F-0506 ಆಗಿದೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದ:**

ಪೋಟೋಗಳನ್ನು ಯಾರು ತೆಗೆದರು ಎಂದು ನನಗೆ ಗೊತ್ತಿಲ್ಲ. ಚಾಸಾ-11 ರವರು ನನ್ನನ್ನು ಮೇಲೆ ಹೇಳಿದ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು. ನಿಪಿ-14 ರಲ್ಲಿ ಏನು ಬರೆದಿದೆ ಎಂದು ನಾನು ಓದಿ ನೋಡಿಲ್ಲ. ಪೋಲಿಸರು ಸಹಿ ಮಾಡು ಎಂದಿದ್ದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿ:

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.